Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in** **principal@klsvdit.edu.in**

KLS/ VDIT/ Date: 04-04-2022

**ಪತ್ರಿಕಾ ಪ್ರಕಟಣೆ:**

## ಗಣಿತೀಯ ವಿನ್ಯಾಸದ ಕುರಿತು ಐ.ಐ.ಟಿ ತಜ್ಞರಿಂದ ವಿಚಾರ ಸಂಕಿರಣ

ಕರ್ನಾಟಕ ಲಾ ಸೊಸೈಟಿಯ ವಿಶ್ವನಾಥರಾವ್ ದೇಶಪಾಂಡೆ ತಾಂತ್ರಿಕ ಮಹಾವಿದ್ಯಾಲಯ ಹಳಿಯಾಳದ ಮೆಕ್ಯಾನಿಕಲ್ ಇಂಜನಿಯರಿಂಗ್ ವಿಭಾಗದಲ್ಲಿ ಎಪ್ರೀಲ್ 4 ರಂದು ಗಣಿತೀಯ ವಿನ್ಯಾಸದ (ನ್ಯುಮರಿಕಲ್ ಮಾಡೆಲಿಂಗ್) ಕುರಿತು ಆನ್‌ಲೈನ್ ವಿಚಾರ ಸಂಕಿರಣ ಆಯೋಜಿಸಲಾಗಿತ್ತು.

ಬೆಳಿಗ್ಗೆ 10 ಗಂಟೆಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ ಐ.ಐ.ಟಿ ಕಾನ್ಪುರದ ಗಣಿತ ಮತ್ತು ಸಂಖ್ಯಾ ಶಾಸ್ತ್ರ ವಿಭಾಗದ ವಿಜ್ಞಾನಿಗಳಾದ ಡಾ. ಶೈನಾಥ್ ಕಲಂಕರ್ ಅವರು ಮಾತನಾಡುತ್ತ ನ್ಯುಮರಿಕಲ್ ಮಾಡೆಲಿಂಗ್ ಒಂದು ಅಭಿವೃದ್ಧಿ ಹೊಂದುತ್ತಿರುವ ಕ್ಷೇತ್ರವಾಗಿದ್ದು ದ್ರವ ವಸ್ತುಗಳ ಚಲನೆ ಹಾಗೂ ಯಂತ್ರಗಳ ಮಾದರಿ ವಿನ್ಯಾಸದ ಅಣಕು ರಚನೆಗಳನ್ನು ತಯಾರಿಸಿ ಗುಣಲಕ್ಷಣಗಳನ್ನು ಅಧ್ಯಯನ ಮಾಡಲು ಈ ತಂತ್ರಜ್ಞಾನ ಸೂಕ್ತವಾಗಿದೆ ಎಂದು ನುಡಿದರು. ಅಟೋಮೊಬೈಲ್, ವಿಮಾನ ತಯಾರಿಕೆ ಮತ್ತು ರಕ್ಷಣಾ ವಲಯಗಳಲ್ಲಿ ಈ ತಂತ್ರಜ್ಞಾನ ಬಳಕೆಯಾಗುತ್ತಿದ್ದು ವಿದ್ಯಾರ್ಥಿಗಳು ಈ ಕ್ಷೇತ್ರದಲ್ಲಿರುವ ಉದ್ಯೋಗಾವಕಾಶಗಳನ್ನು ಬಳಸಿಕೊಳ್ಳಬೇಕೆಂದು ಕರೆ ನೀಡಿದರು.

ಮೆಕ್ಯಾನಿಕಲ್ ಇಂಜನಿಯರಿಂಗ್ ವಿಭಾಗ ಮುಖ್ಯಸ್ಥರಾದ ಡಾ. ಕೆ. ಎಸ್ ಪೂಜಾರ್ ಸ್ವಾಗತಿಸಿದರು. ಪ್ರೊ. ರವಿಕುಮಾರ ತಲಪಾಟಿ ನಿರೂಪಿಸಿದರು. ಪ್ರೊ. ನವೀನ್ ಹಿರೇಮಠ್ ವಂದಿಸಿದರು. ಗೂಗಲ್ ಮೀಟ್ ಮುಖಾಂತರ ನಡೆದ ಈ ಕಾರ್ಯಕ್ರಮದಲ್ಲಿ 100 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು ಎಂದು ಪ್ರಾಂಶುಪಾಲರಾದ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology
Haliyal - 581 329 (U.K.)



ಡಾ. ಶೈನಾಥ್ ಕಲಂಕರ್